## ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.
**ಸಿ.ಸಿ ನಂಃ 101/ 2015**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ತುಳಸಿರಾಮ್ | ಫ್ರಾಸಾಃ **32** |
| ತಂದೆಯ ಹೆಸರುಃ | ಕೂನ್ಯ ನಾಯಕ್ | ಚಾಸಾಃ **48** |
| ವಯಸ್ಸುಃ | **54** ವರ್ಷ | ದಿಃ **03-11-2025** |
| ಉದ್ಯೋಗಃ | ಒಕ್ಕಲುತನ ಹಾಗೂ ವಾಹನ ಚಾಲನೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಬೋರಬಂಡಾ ಗ್ರಾಮ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ</u>

ದಿಃ 28.06.2014 ರಂದು ನನ್ನ ಹೆಂಡತಿ ಹಾಗೂ ನಮ್ಮೂರಿನ ಹಲವಾರು ಜನರು ಬೆಟ್ಟದಳ್ಳಿ ಗ್ರಾಮಕ್ಕೆ ಸುನಿತಾ ರವರ ಅಂತ್ಯ ಸಂಸ್ಕಾರಕ್ಕೆ ಹೋಗಿದ್ದರು ಎಂದರೆ ಸರಿ. ಸದರಿಯವರು ಆರೋಪಿಯ ಕೆಎ-19 ಬಿ 2331 ಸಂಖ್ಯೆಯ ಐಶರ್ ಕಂಪನಿಯ ಗೂಡ್ಸ್ ವಾಹನದಲ್ಲಿ ಬೋರಬಂಡಾದಿಂದ ಬೆಟ್ಟದಳ್ಳಿ ಗ್ರಾಮಕ್ಕೆ ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ದಿನ ಮಃ 12.30 ಗಂಟೆಗೆ ನಾನು ಗ್ರಾಮದಲ್ಲಿದ್ದಾಗ ನನ್ನ ಹೆಂಡತಿ ಹಾಗೂ ಇತರರು ಮರಳಿ ಊರಿಗೆ ಬರುತ್ತಿರುವಾಗ ಚಿನ್ನಕಾರ ಗ್ರಾಮದ ಗುಡ್ಡದಲ್ಲಿ ವಾಹನ ಪಲ್ಟಿಯಾಗಿ ನನ್ನ ಹೆಂಡತಿ ಹಾಗೂ ಇತರರಿಗೆ ಗಾಯಗಳಾಗಿರುತ್ತವೆ ಎಂದು ನನಗೆ ವಿಷಯ ಗೊತ್ತಾಗಿತ್ತು ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾಃ 5 ರವರು ಸ್ಥಳಕ್ಕೆ ಹೋಗಿ ನೋಡಿದಾಗ ವಾಹನ ಸಣ್ಣ ಮುಖಪ್ಪ ಕುರುಬರ್ ಇವರ ಹೊಲದ ಹತ್ತಿರ ಪಲ್ಟಿಯಾಗಿದ್ದು ನನ್ನ ಹೆಂಡತಿಯ ಮೂಗಿಗೆ ಮತ್ತು ಹಣೆಯ ಮೇಲೆ ಭಾರಿ ಗಾಯ ಹಾಗೂ ಎದೆಗೆ ಒಳಪೆಟ್ಟಾಗಿರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ವಾಹನದಲ್ಲಿ ಇದ್ದ ಉಳಿದ ಪ್ರಯಾಣಿಕರಿಗೂ ಗಾಯಗಳಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಚಾಸಾಃ 1 ರವರನ್ನು ವಿಚಾರಿಸಲಾಗಿ ಆರೋಪಿ ವಾಹನವನ್ನು ಅತೀ ವೇಗ ಮತ್ತು ಅಲಕ್ಷತನದಿಂದ ಓಡಿಸಿ ರಸ್ತೆಯ ಬಲಭಾಗದಲ್ಲಿ ಪಲ್ಟಿ ಮಾಡಿ ಅಪಘಾತ ಪಡಿಸಿರುತ್ತಾನೆ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಗಾಯಾಳು ಸೋಮಲಾ

ರವರು ರಾಯಚೂರಿನ ರಿಮ್ಸ್ ಆಸ್ಪತ್ರೆಯಲ್ಲಿ ದಿಃ 08.07.2014 ರಂದು ಮರಣಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-38 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಷಯ ಗೊತ್ತಿದ್ದರೂ ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರವಾಗಿ</u>

ಆರೋಪಿ ಪರ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ

## ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

**ಸಿ.ಸಿ ನಂಃ 101/ 2015**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ಬುಗ್ಯಾನಾಯಕ | ಫ್ರಾಸಾಃ **33** |
| ತಂದೆಯ ಹೆಸರುಃ | ಶೇವ್ಯಾನಾಯಕ್ | ಚಾಸಾಃ **55** |
| ವಯಸ್ಸುಃ | **65** ವರ್ಷ | ದಿಃ **03-11-2025** |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಬೋರಬಂಡಾ ಗ್ರಾಮ | |

ಸಾಕ್ಷಿಗೆ ಹಿಂದಿ ಭಾಷೆ ಬರುತ್ತದೆ ಕನ್ನಡ ಭಾಷೆ ಬರುವುದಿಲ್ಲ ಎಂದು ಹೇಳಿದ ಮೇರೆಗೆ ಶ್ರೀ MKVA ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಲಾಯಿತು ಹಾಗೂ ಅವರಿಗೆ ಪ್ರಮಾಣ ವಚನ ಭೊದಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>

ನನಗೆ ಚಾಸಾಃ 1 ಹಾಗೂ ಆರೋಪಿಯ ಪರಿಚಯ ಇದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ</u>

ದಿಃ 28.06.2014 ರಂದು ನಾನು ಹಾಗೂ ನಮ್ಮೂರಿನ ಹಲವಾರು ಜನರು ಆರೋಪಿಯ ಕೆಎ-19 ಬಿ 2331 ಸಂಖ್ಯೆಯ ಐಶರ್ ಕಂಪನಿಯ ಗೂಡ್ಸ್ ವಾಹನದಲ್ಲಿ ಬೋರಬಂಡಾದಿಂದ ಬೆಟ್ಟದಳ್ಳಿ ಗ್ರಾಮಕ್ಕೆ ಅಂತ್ಯ ಸಂಸ್ಕಾರಕ್ಕೆ ಹೋಗಿದ್ದೆವು ಎಂದರೆ ಸರಿ. ನಾವು ಮರಳಿ ಬರುತ್ತಿರುವಾಗ ಆರೊಪಿ ವಾಹವನ್ನು ಅತೀ ವೇಗ ಮತ್ತು ಅಲಕ್ಷತನದಿಂದ ಚಾಲನೆ ಮಾಡಿ ರಸ್ತೆಯ ಬಲಭಾಗದಲ್ಲಿ ಪಲ್ಟಿಮಾಡಿದ್ದನು ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ಬಲಗೈ ಬೆರಳಿಗೆ, ಮೂಗಿಗೆ ಹಾಗೂ ಎಡ ಉಬ್ಬಿಗೆ ರಕ್ತಗಾಯಗಳು ಮತ್ತು ಕಾಲಿನ ಎಡಗಾಲು ಮೊಣಕಾಲಿಗೆ ಒಳಪೆಟ್ಟಾಗಿತ್ತು ಎಂದರೆ ಸರಿ. ನನ್ನಂತೆ ಉಳಿದ ಪ್ರಯಾಣಿಕರಿಗೂ ಗಾಯಗಳಾಗಿದ್ದವು ಹಾಗೂ ಚಾಸಾಃ 5 ಮತ್ತು 48 ರವರು ನನ್ನನ್ನು ಗುರುಮಠಕಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಸೋಮ್ಲಾ ಪವಾರ್ ರವರಿಗೆ ಅಪಘಾತದಲ್ಲಿ ಭಾರಿ ಗಾಯಗಳಾಗಿದ್ದರಿಂದ ರಾಯಚೂರು ಆಸ್ಪತ್ರೆಗೆ ಕರೆದುಕೊಂಡು ಹೊಗುವಂತೆ ವೈದ್ಯರು ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸೋಮ್ಲಾ ರವರು ಉಪಚಾರ ಫಲಿಸದೇ 10 ದಿನಗಳ ನಂತರ ಆಸ್ಪತ್ರೆಯಲ್ಲಿ

ಮರಣಹೊಂದಿರುತ್ತಾನೆ ಎಂದರೆ ಸಾಕ್ಷಿಯು ಆತ ಮರಣಹೊಂದಿರುವುದು ನನಗೆ ಗೊತ್ತು ಆದರೆ ಅಪಘಾತದ ಪರಿಣಾಮವಾಗಿ ಮರಣಹೊಂದಿರುತ್ತಾನೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾನೆ. ಅಪಘಾತ ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದು ನೀವು ಪೋಲಿಸರಿಗೆ ಹೇಳಿಕೆ ನೀಡಿದ್ದೀರಿ ಎಂದರೆ ಸಾಕ್ಷಿಯು ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ನಿಪಿ-39 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರವಾಗಿಃ</u>

ಆರೋಪಿ ಪರ  ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ

## ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.
**ಸಿ.ಸಿ ನಂಃ 101/ 2015**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ತೇಜಾ | ಫ್ರಾಸಾಃ **34** |
| ತಂದೆಯ ಹೆಸರುಃ | ಹನಮ್ಯಾ | ಚಾಸಾಃ **56** |
| ವಯಸ್ಸುಃ | **55** ವರ್ಷ | ದಿಃ **03-11-2025** |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಬೋರಬಂಡಾ ಗ್ರಾಮ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನನಗೆ ಚಾಸಾಃ 1 ಮತ್ತು ಆರೋಪಿಯ ಪರಿಚಯ ಇದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ

ದಿಃ 28.06.2014 ರಂದು ನಾನು ಹಾಗೂ ನಮ್ಮೂರಿನ ಹಲವಾರು ಜನರು ಆರೋಪಿಯ ಕೆಎ-19 ಬಿ 2331 ಸಂಖ್ಯೆಯ ಐಶರ್ ಕಂಪನಿಯ ಗೂಡ್ಸ್ ವಾಹನದಲ್ಲಿ ಬೋರಬಂಡಾದಿಂದ ಬೆಟ್ಟದಳ್ಳಿ ಗ್ರಾಮಕ್ಕೆ ಅಂತ್ಯ ಸಂಸ್ಕಾರಕ್ಕೆ ಹೋಗಿದ್ದೆವು ಎಂದರೆ ಸರಿಯಲ್ಲ. ಮರಳಿ ಬರುವಾಗ ಆರೋಪಿ ವಾಹನವನ್ನು ಅತೀ ವೇಗ ಮತ್ತು ಅಲಕ್ಷತನದಿಂದ ಚಾಲನೆ ಮಾಡಿ ರಸ್ತೆಯ ಬಲಭಾಗದಲ್ಲಿ ಪಲ್ಟಿ ಮಾಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಅಪಘಾತದಲ್ಲಿ ನನ್ನ ಎದೆಗೆ ಭಾರಿ ಒಳಪೆಟ್ಟು ಹಾಗೂ ಮೈ ಮೇಲೆ ತರಚಿದ ಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಉಳಿದ 67 ಜನ ಪ್ರಯಾಣಿಕರಿಗೂ ಸಹ ಗಾಯಗಳಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಚಾಸಾಃ 5 ಮತ್ತು 48 ರವರು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಗಾಯಾಳು ಸೋಮಲಾ ರವರು ರಾಯಚೂರಿನ ರಿಮ್ಸ್ ಆಸ್ಪತ್ರೆಯಲ್ಲಿ ದಿಃ 08.07.2014 ರಂದು ಮರಣಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-40 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಷಯ ಗೊತ್ತಿದ್ದರೂ ನಾನು ಆರೊಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರವಾಗಿ

ಆರೋಪಿ ಪರ  ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ

## ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

**ಸಿ.ಸಿ ನಂಃ 101/ 2015**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ಭೀಮ್ಯಾನಾಯಕ | ಫಿಪ್ರಾಸಾಃ **35** |
| ತಂದೆಯ ಹೆಸರುಃ | ಅಬ್ಯಾನಾಯಕ | ಚಾಸಾಃ **58** |
| ವಯಸ್ಸುಃ | **60** ವರ್ಷ | ದಿಃ **03-11-2025** |
| ಉದ್ಯೋಗಃ | ಏನು ಇಲ್ಲ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಬೋರಬಂಡಾ ಗ್ರಾಮ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನನಗೆ ಚಾಸಾಃ 1, 5 ಹಾಗೂ 48 ರವರ ಪರಿಚಯ ಇಲ್ಲ. ನನಗೆ ಆರೋಪಿಯ ಪರಿಚಯ ಇದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ

ದಿಃ 28.06.2014 ರಂದು ನಾನು ಹಾಗೂ ನಮ್ಮೂರಿನ ಹಲವಾರು ಜನರು ಆರೋಪಿಯ ಕೆಎ-19 ಬಿ 2331 ಸಂಖ್ಯೆಯ ಐಶರ್ ಕಂಪನಿಯ ಗೂಡ್ಸ್ ವಾಹನದಲ್ಲಿ ಬೋರಬಂಡಾದಿಂದ ಬೆಟ್ಟದಳ್ಳಿ ಗ್ರಾಮಕ್ಕೆ ಅಂತ್ಯ ಸಂಸ್ಕಾರಕ್ಕೆ ಹೋಗಿದ್ದೆವು ಎಂದರೆ ಸರಿಯಲ್ಲ. ಮರಳಿ ಬರುವಾಗ ಆರೋಪಿ ವಾಹನವನ್ನು ಅತೀ ವೇಗ ಮತ್ತು ಅಲಕ್ಷತನದಿಂದ ಚಾಲನೆ ಮಾಡಿ ರಸ್ತೆಯ ಬಲಭಾಗದಲ್ಲಿ ಪಲ್ಟಿ ಮಾಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಅಪಘಾತದಲ್ಲಿ ನನ್ನ ಎಡಗೈ ಹಸ್ತದ ಮಣಿಕಟ್ಟಿನ ಹತ್ತಿರ ಭಾರಿ ಗಾಯವಾಗಿ ಮುರಿದಿತ್ತು ಮತ್ತು ಮೈ ಮೇಲೆ ತರಚಿದ ಗಾಯಗಳಾಗಿ ಎದೆಗೆ ಒಳಪಟ್ಟೆಗಿತ್ತು ಎಂದರೆ ಸರಿಯಲ್ಲ. ಉಳಿದ 67 ಜನ ಪ್ರಯಾಣಿಕರಿಗೂ ಸಹ ಗಾಯಗಳಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಚಾಸಾಃ 5 ಮತ್ತು 48 ರವರು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಗಾಯಾಳು ಸೋಮಲಾ ರವರು ರಾಯಚೂರಿನ ರಿಮ್ಸ್ ಆಸ್ಪತ್ರೆಯಲ್ಲಿ ದಿಃ 08.07.2014 ರಂದು ಮರಣಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-41 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಷಯ ಗೊತ್ತಿದ್ದರೂ ನಾನು ಆರೊಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರವಾಗಿ

ಆರೋಪಿ ಪರ ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ

ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.
<u>ಸಿ.ಸಿ ನಂಃ **101/ 2015**</u>

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ರಾಮು ನಾಯಕ | ಫ್ರಾಸಾಃ **36** |
| ತಂದೆಯ ಹೆಸರುಃ | ತಿಪ್ಪಣ್ಣ | ಚಾಸಾಃ **59** |
| ವಯಸ್ಸುಃ | ಅಂದಾಜು **70** ವರ್ಷ | ದಿಃ **03-11-2025** |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಬೋರಬಂಡಾ ಗ್ರಾಮ | |

<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ</u>

ನನಗೆ ಚಾಸಾಃ 1, 5 ಹಾಗೂ 48 ಮತ್ತು 55 ರಿಂದ 58 ರವರ ಪರಿಚಯ ಇಲ್ಲ. ನನಗೆ ಆರೋಪಿಯ ಪರಿಚಯ ಇದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)

<u>ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ</u>

ದಿಃ 28.06.2014 ರಂದು ನಾನು ಹಾಗೂ ನಮ್ಮೂರಿನ ಹಲವಾರು ಜನರು ಆರೋಪಿಯ ಕೆಎ-19 ಬಿ 2331 ಸಂಖ್ಯೆಯ ಐಶರ್ ಕಂಪನಿಯ ಗೂಡ್ಸ್ ವಾಹನದಲ್ಲಿ ಬೋರಬಂಡಾದಿಂದ ಬೆಟ್ಟದಳ್ಳಿ ಗ್ರಾಮಕ್ಕೆ ಅಂತ್ಯ ಸಂಸ್ಕಾರಕ್ಕೆ ಹೋಗಿದ್ದೆವು ಎಂದರೆ ಸರಿಯಲ್ಲ. ಮರಳಿ ಬರುವಾಗ ಆರೋಪಿ ವಾಹನವನ್ನು ಅತೀ ವೇಗ ಮತ್ತು ಅಲಕ್ಷತನದಿಂದ ಚಾಲನೆ ಮಾಡಿ ರಸ್ತೆಯ ಬಲಭಾಗದಲ್ಲಿ ಪಲ್ಟಿ ಮಾಡಿದ್ದನು ಎಂದರೆ ನನಗೆ ಗೊತ್ತಿಲ್ಲ. ಅಪಘಾತದಲ್ಲಿ ನನ್ನ ಬಲಗೈ ರಟ್ಟೆಗೆ, ಹಸ್ತಕ್ಕೆ ತಲೆಗೆ ಹಾಗೂ ಬಲಗಾಲಿನ ಪಾದದ ಹತ್ತಿರ ಮತ್ತು ಎಡ ಮೊಣಕಾಲಿಗೆ ರಕ್ತಗಾಯಗಳಾಗಿದ್ದವು ಎಂದರೆ ಸರಿಯಲ್ಲ. ಉಳಿದ 67 ಜನ ಪ್ರಯಾಣಿಕರಿಗೂ ಸಹ ಗಾಯಗಳಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಚಾಸಾಃ 5 ಮತ್ತು 48 ರವರು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಗಾಯಾಳು ಸೋಮಲಾ ರವರು ರಾಯಚೂರಿನ ರಿಮ್ಸ್ ಆಸ್ಪತ್ರೆಯಲ್ಲಿ ದಿಃ 08.07.2014 ರಂದು ಮರಣಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ-42 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಷಯ ಗೊತ್ತಿದ್ದರೂ ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರವಾಗಿ</u>

ಆರೋಪಿ ಪರ  ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ